ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಏನಾದರೂ ತಿಳಿಸಿದ್ದಾರೆಯೇ ? ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಅಲ್ಲಿಯ ಶಾಸಕರ ಸಭೆಯನ್ನು ಕರೆದು ಈ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಿ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತಾರೆಯೇ ? ಇಲ್ಲದಿದ್ದರೆ ಮಾನ್ಯ ಮಂತ್ರಿಗಳವರು ಬೆಳಗಾಂ ಜಿಲ್ಲೆಗೆ ಹೋದರೆ ಅಲ್ಲಿ ಜನ ಘೆರಾವೋ ಮಾಡತಕ್ಕ ಪರಿಸ್ಥಿತಿ ಬಂದಿದೆ, ಆದುದರಿಂದ ದಯವಿಟ್ಟು ಆ ಪರಿಸ್ಥಿತಿ ಬಾರದ್ದ ಹಾಗೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್(ಕಂದಾಯ ಮಂತ್ರಿಗಳು.)— ಮಾನ್ಯ ಅಧ್ಯಕ್ಷರೇ ಬೆಳಗಾಂ ಜಿಲ್ಲೆ, ಯಲ್ಲಿ ಸುಮಾರು ಹುಕ್ಕೇರಿ ತಾಲ್ಲೂಕಿನಲ್ಲಿ 39 ಹಳ್ಳಿಗಳು, ಚಿಕ್ಕೋಡಿ ತಾಲ್ಲೂಕಿನಲ್ಲಿ 22 ಹಳ್ಳಿಗಳು, ಗೋಕಾಕತಾಲ್ಲೂಕಿನಲ್ಲಿ 19, ಸವದತ್ತಿ ತಾಲ್ಲೂಕಿನಲ್ಲಿ 24, ರಾಮದುರ್ಗ ತಾಲ್ಲೂಕಿನಲ್ಲಿ 29, ಹಳ್ಳಿಗಳ ಹೀಗೆ ಒಟ್ಟು 149 ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ. ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ಸುಮಾರು 1983-84 ರಲ್ಲಿ 67.16 ಲಕ್ಷವನ್ನು ಈಗಾಗಲೇ ರಿಲೀಸ್ ಮಾಡಿದ್ದೇವೆ. ಮತ್ತು 31-3-1984 ರಂದು 52 ಲಕ್ಷ ರೂ. ಗಳನ್ನು ರಿಲೀಸ್ ಮಾಡಿದ್ದೇವೆ. ಈಗ ಒಟ್ಟು ಎಲ್ಲಾ ತಾಲ್ಲೂಕ್‌ಗಳಲ್ಲಿ 548 ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ 182 ಕೆಲಸ ಪೂರ್ತಿಯಾಗಿದೆ. ಇನ್ನು ಕೆಲವು ಕಡೆಗಳಲ್ಲಿ ಕೆಲಸ ಪೂರ್ತಿಯಾಗಿಲ್ಲ ಮಾಡಬೇಕಾಗಿದೆ. ಆದುದರಿಂದ ಅದಕ್ಕೆ ಬೇಕಾದ ಎಲ್ಲಾ ಕೆಲಸವನ್ನು ಸಹ ಸರ್ಕಾರ ಅಲ್ಲಿ ತೆಗೆದುಕೊಳ್ಳುತ್ತದೆ.

(xv) ಮೈಸೂರು C.I.T.B. ಯಲ್ಲಿ ಅವ್ಯವಹಾರ

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮೈಸೂರು ಸಿ.ಐ.ಟಿ.ಬಿ. ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಾನು ಅಲ್ಲಿಗೆ ಮೊನ್ನೆ ದಿವಸ ಹೋಗಿದ್ದಾಗ ಕೆಲವು ಜನ ಬಂದು ನನ್ನನ್ನು ಭೇಟಿಯಾಗಿ ಮನವಿಗಳನ್ನು ಕೊಟ್ಟು ಹೋಗಿದ್ದಾರೆ. ನಾನು ಆಗ ಪತ್ರಿಕಾ ವರದಿಗಾರರನ್ನು ಕರೆದು ಒಂದು ಹೇಳಿಕೆಯನ್ನು ಕೊಟ್ಟೆ. ಆನಂತರ ಅಲ್ಲಿಯ ಸಿ.ಐ.ಟಿ.ಬಿ. ಅಧ್ಯಕ್ಷರು ಅವರು ಸಹ ಒಂದು ಹೇಳಿಕೆ ನೀಡಿ ಇದಕ್ಕಿಂತ ಹೆಚ್ಚು ಅವ್ಯವಹಾರಗಳು ಅಲ್ಲಿ ಹಿಂದೆ ನಡೆದಿದೆ ಎಂದು ಹೇಳಿಕೆ ನೀಡಿದ್ದಾರೆ. ಸ್ಪೇರ್‌ಪೈಟ್‌ಗಳನ್ನು ಹಿಂದೆ ಇದ್ದವರು ಯಾರೋ ಕೊಟ್ಟು ಬಿಟ್ಟಿದ್ದಾರೆ ಎಂದು ಹೇಳಿದ್ದಾರೆ. ಯಾರೇ ತಪ್ಪು ಮಾಡಿರಲಿ ಅದು ತಪ್ಪು ಆಗಿದ್ದರೆ ತಪ್ಪು ಎಂದೇ ಹೇಳಬೇಕಾಗುತ್ತದೆ. ಆದುದರಿಂದ ಅದನ್ನು ಇವರು ಸರಿ ಮಾಡಲಿಕ್ಕೆ ಹೋಗುವುದು ಬೇಡ

ಅಧ್ಯಕ್ಷರು.—ಡಿಟೇಲ್ಸ್‌ಗೆ ಹೋಗುವುದು ಬೇಡ

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಅನುಮತಿ ಕೊಟ್ಟರೆ ಹೇಳುತ್ತೇನೆ. ಇಲ್ಲದಿದ್ದರೆ ವಿಷಯವನ್ನೇ ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ನಿಯಮ 334ರ ಕೆಳಗೆ 32 ವಿಷಯಗಳು ಬಂದಿವೆ. ಹೀಗಾದರೆ ನಾವು ಅವುಗಳನ್ನೆಲ್ಲಾ ಯಾವಾಗ ತೆಗೆದುಕೊಂಡು ಪೂರೈಸುವುದು ?

ಶ್ರೀ ಎಂ. ವೀರಪ್ಪಮೊಯ್ಲಿ.—334ನೇ ನಿಯಮದ ಕೆಳಗೆ ಬಹಳ ಪ್ರಾಮುಖ್ಯವಾದ ವಿಚಾರವನ್ನು ಎತ್ತುತ್ತಿದ್ದೇನೆ, ಎತ್ತಬಾರದೆಂದು ತಾವು ಹೇಳುವುದಾದರೆ.

ಅಧ್ಯಕ್ಷರು.—ಎತ್ತಬಾರದೆಂದು ನಾನು ಹೇಳುತ್ತಿಲ್ಲ, ಹಾಗೆ ಹೇಳುವ ಹಾಗಿದ್ದರೆ ನಾನು ಏತಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು ? ಒಬ್ಬೊಬ್ಬರು ಒಂದೊಂದು ವಿಷಯದ ಬಗ್ಗೆ 10-15 ನಿಮಿಷ ಮಾತನಾಡಿದರೆ 334 ಕೆಳಗೆ ಇರತಕ್ಕ 20-30 ವಿಷಯಗಳನ್ನು ಮುಗಿಸುವುದಾದರೂ ಹೇಗೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ನಿಯಮದ ಪ್ರಕಾರವಾಗಿಯೇ ಫಾಲೋ ಮಾಡುವುದಾದರೆ ನಿಯಮದ ಪ್ರಕಾರವಾಗಿಯೇ ಹೋಗೋಣ.

12-30 p.m.

ನಮ್ಮ ಆಡಳಿತ ಬಂದ ಮೇಲೆ ಸಿ.ಐ.ಟಿ.ಬಿ ಯಲ್ಲಿ 10 ದಿವಸಗಳಲ್ಲಿ 2000 ನೀವೇಶನಗಳನ್ನು ಹಂಚಲಾಗಿದೆ ಎಂದು ಹೇಳಿದ್ದಾರೆ. 10 ದಿವಸಗಳಲ್ಲಿ 2000 ನಿವೇಶನಗಳನ್ನು ಹಂಚುವುದು ಅಂದರೆ ಬಹಳ ದಕ್ಷತೆ ಇದೆ ಎಂದು ಹೇಳಬೇಕಾಗುತ್ತದೆ. 10 ದಿವಸಗಳಲ್ಲಿ 2000 ನಿವೇಶನಗಳನ್ನು ಹಂಚಿದ್ದರಿಂದ ಬಹಳ ಒಳ್ಳೆಯ ಕೆಲಸ ಮಾಡುತ್ತಾ ಇದ್ದಾರೆ ಎಂದು ಜನ ಹೇಳುತ್ತಾರೆ ಎಂಬುದಾಗಿ ಅವರ ದೇಳಿಕೆ ಇದೆ. ಆಮೇಲೆ 100 ದಿವಸಗಳಲ್ಲಿ 5 ಕೋಟಿ ರೂಪಾಯಿಗಳ ವ್ಯವಹಾರ ಆಗಿಬಿಟ್ಟಿದೆ. ಅದು ವ್ಯವಹಾರವೋ, ಅವ್ಯವಹಾರವೋ ಎಂದು ನೋಡಬೇಕಾಗಿದೆ. ಇದು ಯಾರ

ಮರ್ಜಿಗೆ ನಡೆಯುತ್ತದೋ ಗೊತ್ತಿಲ್ಲ. ಅದಕ್ಕಿಂತ ಬೇರೆ ಹೇಳುವುದು ಏನಿಲ್ಲ. 100 ದಿವಸಗಳಲ್ಲಿ 5 ಕೋಟಿ ವ್ಯವಹಾರವಾಗಿದೆ, 10 ದಿವಸಗಳಲ್ಲಿ 2000 ನಿವೇಶನಗಳನ್ನು ಹಂಚಿದ್ದಾರೆ. ಕೆಲವು ಸಂಸ್ಥೆಗಳಿಗೆ ಜಮೀನು ಕೊಟ್ಟಿದ್ದಾರೆ. ಬೀಡಿ ಕಾರ್ಮಿಕರ ಆಸ್ಪತ್ರೆಗೆ, ಕಾರ್ಮಿಕರಿಗೆ 40 ಎಕರೆ, ಕರ್ನಾಟಕ ಗೃಹನಿರ್ಮಾಣ ಸಂಸ್ಥೆಗೆ 25 ಎಕರೆ ಕೊಟ್ಟಿದ್ದಾರೆ, ಅದೆಲ್ಲಾ ಬಿಡಿ, ಈಗ ಗೋಕುಲಂ ಕಲ್ಯಾಣ ಮಂಟಪ ಟ್ರಸ್ಟ್‌ಗೆ 10 ಎಕರೆ ಕೊಟ್ಟಿದ್ದಾರೆ. ಅದು ಗ್ರೀನ್‌ಬೆಲ್ಟ್‌ನಲ್ಲಿ ಬರತಕ್ಕಂಥ ಜಾಗ. ಈ ಟ್ರಸ್ಟ್ ಬರೀ 3 ತಿಂಗಳ ಹಿಂದೆ ರಿಜಿಸ್ಟರಾಯಿತು. ಇದು ಆ ಜಾಗವನ್ನು ಕಬಳಿಸಲಿಕ್ಕೇ ಮಾಡಿದಂತಹ ಕೆಲಸ ಎಂದು ತೋರಿಕೆಗೆ ಕಾಣುತ್ತದೆ. ಈ ಟ್ರಸ್ಟ್ 3 ತಿಂಗಳ ಹಿಂದೆ ಸ್ಥಾಪನೆಯಾಯಿತು. ಟೂರಿಸಂ ಮಿನಿಸ್ಟರ್ ರವರು ಇಲ್ಲಿ ಇದ್ದಾರೆ. ಮೈಸೂರು ಪಟ್ಟಣಕ್ಕೆ ಬಹಳ ಟೂರಿಸ್ಟ್‌ಸ್ ಬರುತ್ತಾರೆ. ಅಲ್ಲಿ ತೋಟ ಇದೆ. ತೆಂಗಿನ ಮರಗಳು ಸುಮಾರು 800 ಇದೆ. ಅಡಿಕೆ ತೋಟ ಎಲ್ಲಾ ಇರತಕ್ಕಂಥ ಜಾಗ. ಅಲ್ಲಿ ನಾವು ಟೂರಿಸಂ ಸ್ಪಾಟ್ ಮಾಡಬೇಕು, ಮರಗಳನ್ನು ತೆಗೆಯಬಾರದು. ಅಲ್ಲಿ ನೆರಳಿನಲ್ಲಿ ಜನ, ಬಸ್ಸುಗಳು ಬಂದು ನಿಲ್ಲಬೇಕು; ಅಲ್ಲಿ ಪಿಕ್‌ನಿಕ್ ಸ್ಪಾಟ್ ಮಾಡಬೇಕು ಎಂದು ಹಿಂದೆ ಆ ಬಗ್ಗೆ ಕರೆಸ್ಪಾಂಡೆನ್ಸ್ ಎಲ್ಲ ನಡೆದಿದೆ. ಅದು ಗ್ರೀನ್‌ಬೆಲ್ಟ್‌ಗೆ ಸೇರಿದಂಥ ಜಾಗ. ಆ ಜಾಗವನ್ನು ಈ ಟ್ರಸ್ಟ್‌ಗೆ ಕೊಟ್ಟಿದ್ದಾರೆ. ಟ್ರಸ್ಟೀಸ್ ಯಾರು ಅಂದರೆ, D. Made Gowda, Genl. Secretary of the City Janatha Party, H. Kempe Gowda, ಈ ಸದನದ ಸದಸ್ಯರು Gundappa Gowda Janatha Corporator, Jayalakshmi, Mother of the Janatha Mayor, Mrs. Devaraya, Janatha Corporator. ಇವರು ಟ್ರಸ್ಟೀಸ್, ಸರ್ವೆ ನಂಬರ್ 2 ರಿಂದ 9 ರಲ್ಲಿ ಸುಮಾರು 10 ಎಕರೆಯನ್ನು ಈ ಟ್ರಸ್ಟ್‌ಗೆ ಕೊಟ್ಟುಬಿಟ್ಟಿದ್ದಾರೆ. ಹೈಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ಅವರಿಗೆ ಕಾಂಪನ್ಸೇಷನ್ ಎಕರೆಗೆ 15 ಸಾವಿರ ಕೊಡಬೇಕು ಎಂದು ಇತ್ತು. ಈಗ ಎಕರೆಗೆ 12 ಸಾವಿರದಂತೆ ಕೊಡುತ್ತಾ ಇದ್ದಾರೆ. ಈವನ್ ಲೆಸ್‌ದೆನ್ ಕಾಸ್ಟ್ ಪ್ರೈಸ್. ಲ್ಯಾಂಡ್‌ಓನರ್‌ಗೆ ಪ್ರತಿ ಎಕರೆಗೆ 15 ಸಾವಿರ ಕೊಡಬೇಕು. ಎಂದು ಇದ್ದರೂ ಪ್ರತಿ ಎಕರೆಗೆ 12 ಸಾವಿರ ಕೊಡತಕ್ಕ ಪ್ರಯತ್ನ ಅಲ್ಲಿ ನಡೆಯುತ್ತಿದೆ. ಗ್ರೀನ್ ಬೆಲ್ಟ್‌ಗೆ ಸೇರಿದಂಥ ಜಾಗವನ್ನು ಸಾರಾಸಗಟಾಗಿ ಕೊಡುತ್ತಾ ಇದ್ದಾರೆ. ಆಮೇಲೆ ಸೈಟು ಕೊಟ್ಟ ಬಗ್ಗೆ ಉದಾಹರಣೆ ಹೇಳುವುದಾದರೆ, ಕೃಷ್ಣ ಜನತಾ ಕಾರ್ಪೊರೇಟರ್ ಇವರಿಗೆ ಹಿಂದಿನ ಸಿ.ಐ.ಟಿ.ಬಿ ಸೈಟು ಕೊಟ್ಟಿದ್ದು ಇದೆ. ಅವರು ಅದರಲ್ಲಿ ಮನೆಕಟ್ಟಿ ಆ ಮನೆಯನ್ನು 5 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ. He is one of the trustees of the CITB, ಅವರಿಗೆ ಇನ್ನೊಂದು ಸೈಟು ಕೊಟ್ಟುಬಿಟ್ಟಿದ್ದಾರೆ. ಹಿಂದಿನ ಮೈಸೂರು ಸಿಐಟಿಬಿ ಇವರಿಗೆ ಒಂದು ಸೈಟು ಕೊಟ್ಟಿದ್ದರು. ಹೊಸ ಸಿಐಟಿಬಿ ಆದಮೇಲೆ ಮೆಂಬರಾದರು he has become siteless. ಈಗ ಒಂದು ಸೈಟು ಕೊಟ್ಟಿದ್ದಾರೆ. ಈ ರೀತಿ ಅನೇಕರಿಗೆ, ಬೇಕಾದವರಿಗೆ ಸಾರಾಸಗಟಾಗಿ ಹಂಚುತ್ತಿದ್ದಾರೆ. ಅವರು ಏನು ಹೇಳುತ್ತಾ ಇದ್ದಾರೆ ಅಂದರೆ, ಮೊಯ್ಲಿಯವರು ಲೆಟರ್ ಕೊಟ್ಟಿದ್ದರು ಎಂದು ಹೇಳುತ್ತಿದ್ದಾರೆ. ಜರ್ನಲಿಸ್ಟ್ ಬಂದಿದ್ದರು. ನಮಗೆ ಲೆಟರು ಕೊಡಿ, ಜರ್ನಲಿಸ್ಟ್ ಕೋಟಾದಲ್ಲಿ ಕೊಡುತ್ತಾರೆ ಎಂದು ಹೇಳಿದರು ನಾವು ಲೆಟರ್ ಕೊಟ್ಟ ಕೂಡಲೇ ಅಲ್ಲಿ ಕಾನೂನು ಮೀರಿ ಕೊಡಬೇಕು ಎಂದು ಅದರಲ್ಲಿ ಏನೂ ಹೇಳುವುದಿಲ್ಲ. ಕಾನೂನಿಗೆ ಅನುಸಾರವಾಗಿ ಮಾಡಬೇಕು. ಅಲ್ಲಿ ಸಾರಾಸಗಟಾಗಿ ಸೈಟುಗಳನ್ನು ಕೊಟ್ಟಿದ್ದಾರೆ. ಅರ್ಜಿ ಕೊಡುವುದು, ಅದರ ಮೇಲೆ ಅಲೋಕೇಷನ್ ಮಾಡುವುದು. ನೀತಿ ಇಲ್ಲ, ನಿಯಮ ಇಲ್ಲ. ಅಡ್ವರ್‌ಟೈಸ್‌ಮೆಂಟ್ ಇಲ್ಲ, ಅಪ್ಲಿಕೇಷನ್ಸ್ ಕಾಲ್‌ಫರ್ ಮಾಡುವುದಿಲ್ಲ. ಸಾರಾಸಗಟಾಗಿ ಆಗಿದೆ. ಇದರಿಂದ ಸಾಕಷ್ಟು ಅವ್ಯವಹಾರ ಅಲ್ಲಿ ಆಗಿದೆ. ಆದುದರಿಂದ ಈ ಬಗ್ಗೆ ಸಿ.ಒ.ಡಿ. ಎನ್‌ಕ್ವೈರಿ ತಕ್ಷಣ ಆಗಬೇಕು. ಜನತಾ ಸರ್ಕಾರ ಬಂದ ಮೇಲೆ ಎಲ್ಲರೂ ನೀತಿ ನಿಯಮ ಇಲ್ಲದೆ ಸತ್ಯಹರಿಶ್ಚಂದ್ರರಾಗುತ್ತಿದ್ದಾರೆ. ಅವರಿಗೆ ಖುಷಿ ಬಂದಹಾಗೆ ಕೊಡುವುದು ಯಾರಿಗೆ ಮನಸ್ಸು ಬರುತ್ತದೋ ಅವರಿಗೆ ಪ್ಲಾಟ್ ಸೈಟ್ ಎಲ್ಲಾ ಕೊಡುವುದು. ತಾವು ಆ ರೀತಿ ಕಾನೂನು ಮಾಡಿದ್ದರೆ ನಮಗೆ ಹೇಳಿ. ಅಥವಾ ನೀತಿ ನಿಯಮಗಳೊಳಗೆ ಸೈಟುಗಳನ್ನು ಪ್ಲಾಟುಗಳನ್ನು ಕೊಡುತ್ತೇವೆಂದು ಹೇಳಿ. ಅಲ್ಲಿ ಸಂಪೂರ್ಣವಾಗಿ ಅವ್ಯವಹಾರವಾಗಿದೆ. 2000 ಸೈಟುಗಳನ್ನು ಕೊಟ್ಟಿದ್ದು ಇದೆ. ಆಮೇಲೆ ಏನೇನು ಮಾಡಿದ್ದಾರೋ ಅದನ್ನೆಲ್ಲಾ ಕಂಡುಹಿಡಿಯಲಿಕ್ಕೆ ತಕ್ಷಣ ಸಿ.ಒ.ಡಿ. ಎನ್‌ಕ್ವೈರಿ ಆಗಬೇಕು.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು):—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಸಿ.ಐ.ಟಿ.ಬಿ.ಯನ್ನು ಕಾಂಟ್ಯಾಕ್ಟ್ ಮಾಡಿ ಮಾಹಿತಿ ತರಿಸಿಕೊಂಡು ನಾಳೆಇದರ ಬಗ್ಗೆ ಒಂದು ಹೇಳಿಕೆ ಕೊಡುತ್ತೇನೆ.

(XVI) ರಾಯಚೂರಿನಲ್ಲಿ ರೈತರು ಬೆಳೆದ ಬೆಳೆಗೆ ನ್ಯಾಯ ಬೆಲೆ ದೊರಕಿಸಿವ ಬಗ್ಗೆ